**Misc No. 18/2024**

ಪಿ.ಡಬ್ಲೂ **-1**

**ದಿಃ 05-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಎದುರುದಾರರ ಪರ ವಕೀಲರಾದ ಶ್ರೀ AAP ರವರಿಂದಃ-**

1. ಅಸಲು ದಾವಾ ಸಂಖ್ಯೆ 522/2020 ನ್ನು ಮನೆ ನಂಬರ 123 ಗೆ ಸಂಬಂಧಪಟ್ಟಂತೆ ಹೂಡಿರುತ್ತೇನೆ. ಎದುರುದಾರರು ನಮ್ಮ ಮನೆಯ ಪೂರ್ವ ಹಾಗೂ ಪಶ್ಚಿಮ ಭಾಗಕ್ಕೆ ಇರುವ ಕಾರಣ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ಮನೆ ನಂಬರ 122 ಹಾಗೂ ಪಶ್ಚಿಮಕ್ಕೆ ಮನೆ ನಂಬರ 123/1 ಇರಬಹುದು. ಸದರಿ ಮನೆ ನಂಬರ 122 ಹಾಗೂ 123/1 ರ ಮಾಲೀಕರು ಎದುರುದಾರರು ಆಗಿರುತ್ತಾರೆ ಎಂದರೆ ಸರಿ. ಸದರಿ ದಾವೆ ಹೂಡಿದ ಸಂದರ್ಭದಲ್ಲಿ ಮೊದಲಿಗೆ ನಮಗೆ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಸಿಕ್ಕಿರಲಿಲ್ಲ. ದಾವಾ ಹೂಡಿದ ಸಮಯದಲ್ಲಿ ಮನೆ ನಂಬರ 122 ರ ಕಟ್ಟಡ ಕೆಲಸ ಪೂರ್ಣಗೊಂಡಿತ್ತು ಎಂದರೆ ಸರಿಯಲ್ಲ. 2020 ನೇ ಇಸವಿಯಲ್ಲಿ ಮನೆ ನಂಬರ 122 ರ ಕಟ್ಟಡವು ಕಾಲಂ ಹಾಕಿದ ಹಂತದಲ್ಲಿಯೇ ಇತ್ತು. ಸದರಿ ದಾವೆಯಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವು ನನಗೆ 2022-23 ರಲ್ಲಿ ಸಿಕ್ಕಿರುತ್ತದೆ. ದಾವೆಯಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಕೋರಿ 2ನೇ ಬಾರಿ ಹಾಕಿದ ಅರ್ಜಿಯೂ ಸಹ ತಿರಸ್ಕೃತಗೊಂಡಿತ್ತು ಎಂದರೆ ಸರಿಯಲ್ಲ. ಯಾವ ದಿನಾಂಕದಂದು ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಈ ದಾವೆಯಲ್ಲಿ ಎಂದರೆ ಅಸಲು ದಾವಾ ಸಂಖ್ಯೆ 522/2020 ರಲ್ಲಿಎಂದಿಗೂ ಸಹ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಆಗಿರುವುದೇ ಇಲ್ಲ ಎಂದರೆ ಸರಿಯಲ್ಲ. MA 98 ರ ಮೇಲ್ಮನವಿಯನ್ನು ಯಾವ ಇಸವಿಯಲ್ಲಿ ಹಾಕಿರುತ್ತೇನೆ ಎಂದರೆ 2023 ನೇ ಇಸವಿಯಲ್ಲಿ ಇರಬಹುದು. ಸದರಿ ಮೇಲ್ಮನವಿ ಹೂಡಲು ಕಾರಣವೆಂದರೆ ಮೊದಲು ನನಗೆ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಸಿಕ್ಕಿರಲಿಲ್ಲ ಆದಕಾರಣ

ಮೇಲ್ಮನವಿ ಹೂಡಿದ್ದೆನು. 2020 ನೇ ಇಸವಿಯಿಂದ ಮೇಲ್ಮನವಿ ಸಲ್ಲಿಸುವವರೆಗೂ ಎಂದರೆ 2023 ನೇ ಇಸವಿಯವರೆಗೂ ದಾವಾ ಆಸ್ತಿಯಲ್ಲಿ ಆದ ಬೆಳವಣಿಗೆಯ ಕುರಿತು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. MA 98 ರ ಮೇಲ್ಮನವಿಯನ್ನು ಸಲ್ಲಿಸುವ ಕಾಲಕ್ಕೆ ಮನೆ ನಂಬರ 122 ರಲ್ಲಿ ಪ್ರತಿವಾದಿಯರು ಕಟ್ಟಡ ಪೂರ್ಣಗೊಂಡಿತ್ತು ಎಂದರೆ ಸರಿಯಲ್ಲ. 2020 ನೇ ಇಸವಿಯಿಂದ MA 98 ರ ಮೇಲ್ಮನವಿ ಸಲ್ಲಿಸುವವರೆಗೂ ಪ್ರತಿವಾದಿಯರ ಕಟ್ಟಡ ಪೂರ್ಣಗೊಂಡಿರಲಿಲ್ಲ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮನೆ ನಂಬರ 122 ರ ಕಟ್ಟಡವನ್ನು ಪ್ರತಿವಾದಿಯರ ತಮ್ಮದೇ ಆಸ್ತಿಯಲ್ಲಿ ಕಟ್ಟಿಕೊಂಡಿರುತಾರೆ ಎಂದರೆ ಸಾಕ್ಷಿ ತನಗೆ ಸೇರಿದ ಸೆಟ್ ಬ್ಯಾಕ್ ನ್ನು ಬಿಟ್ಟು ಪ್ರತಿವಾದಿಯರು ಕಟ್ಟಡ ಕಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಯಾವುದೇ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಇರಲಿಲ್ಲ ಹಾಗೂ ಯಾವುದೇ ಮನಾಯಿ ಆದೇಶ ಆಗುವ ಮೊದಲೇ ಪ್ರತಿವಾದಿಯರ ಕಟ್ಟಡ ಪೂರ್ಣಗೊಂಡಿತ್ತು ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿಯಲ್ಲಿ ಮನೆ ನಂಬರ 122 ರ ಕಟ್ಟಡ ಕೆಲಸದ ಕುರಿತು ಯಾವುದೇ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಮನೆ ನಂಬರ 123/1 ರ ಕುರಿತುಹೇಳಿರಬಹುದು ಎಂದು ನುಡಿಯುತ್ತಾರೆ.

2. ಮನೆ ನಂಬರ 123 ರ ಪಶ್ಚಿಮ ಭಾಗಕ್ಕೆ ಮನೆ ನಂಬರ 123/1 ರ ಹಳೆಯ ಮನೆ ಇರುತ್ತದೆ ಹಾಗೂ ಅದು ಎರಡು ಮಹಡಿಯ ಮನೆ ಆಗಿರುತ್ತದೆ ಎಂದರೆ ಸರಿ. ಸದರಿ ಹಳೆಯ ಮನೆ ಹಿಂಭಾಗದಲ್ಲಿ ಖಾಲಿಜಾಗ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದ ಸದರಿ ಖಾಲಿ ಜಾಗದಲ್ಲಿ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹಳೆ ಮನೆ ಎರಡು ಮಹಡಿಯದ್ದಾಗಿದ್ದು, ಅದು ಮೊದಲು ಹೇಗೆ ಇತ್ತು ಹಾಗೆಯೇ ಇರುತ್ತದೆ ಹಾಗೂ ಪ್ರತಿವಾದಿಯರು ಅದರಲ್ಲಿ ಬದಲಾವಣೆ ಮಾಡಿರುವುದಿಲ್ಲ ಎಂದರೆ ಸರಿ. ಹಳೆಯ ಮನೆಯ ಮುಂಭಾಗದಲ್ಲಿ ನಾನು ದಾವೆ

ಹೂಡಿದ ನಂತರದಿಂದ ಇಲ್ಲಿಯವರೆಗೂ ಯಾವುದೇ ಬದಲಾವಣೆ ಮಾಡಿರುವುದಿಲ್ಲ ಹಾಗೂ ಆ ಕಟ್ಟಡ ಹಾಗೆ ಇರುತ್ತದೆ ಎಂದರೆ ಸರಿ. ಮನೆ ನಂಬರ 123 ಹಾಗೂ 123/1 ರ ನಡುವೆ ಇರುವ ಗೋಡೆಗೆ ಸಂಬಂಧಪಟ್ಟಂತೆ ಸದರಿ ಆಸ್ತಿಯ ಮಾಲೀಕರ ನಡುವೆ ಒಂದು ನೋಂದಾಯಿತ ಲಿಖಿತ ಕರಾರು ಆಗಿರುತ್ತದೆ ಎಂದರೆ ಸರಿ. ಸದರಿ ಕರಾರಿನಂತೆ ನಡುವಿನ ಸಮಾಯಿಕ ಗೋಡೆಯು ಇರುವಂತೆಯೇ ಇರುತ್ತದೆ, ಯಾವುದೇ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿ. ಮನೆ ನಂಬರ 123/1 ರ ಹಳೆಯ ಮನೆಯ ಹಿಂಭಾಗದಲ್ಲಿ ಕಟ್ಟಡ ಕೆಲಸವನ್ನು ಯಾವಾಗ ಪ್ರಾರಂಭಿಸಿರುತ್ತಾರೆ ಎಂದರೆ ಸಾಕ್ಷಿ 2023 ನೇ ಸಾಲಿನ ಒಳಗೆ ಎಂದು ನುಡಿಯುತ್ತಾರೆ. ಮನೆ ನಂಬರ 123/1 ರ ಮುಂಭಾಗದಲ್ಲಿ ಇರುವ ಹಳೆಯ ಮನೆ ಹಾಗೂ ಹಿಂಭಾಗದಲ್ಲಿ ಇರುವ ಹೊಸ ಕಟ್ಟಡಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯರದ್ದು ಪ್ರತ್ಯೇಕ ನೋಂದಾಯಿತ ಖರೀದಿ ಪತ್ರ ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. MA 98/2023 ರ ಆದೇಶದಲ್ಲಿ ಸದರಿ ಖರೀದಿ ಪತ್ರದ ಕುರಿತು ನಮೂದು ಇರುತ್ತದೆ ಎಂದರೆ ಸರಿ. ನಾನು ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಕೋರಿ ಸಲ್ಲಿಸಿದ ಅರ್ಜಿಯಲ್ಲಿ ಮನೆ ನಂಬರ 123/1 ರ ಜಾಗದಲ್ಲಿ ಪ್ರತಿವಾದಿಯರು ಕಟ್ಟಡ ಕೆಲಸ ನಿರ್ಮಾಣ ಮಾಡುತ್ತಿರುವ ಕುರಿತು ಅತಿಕ್ರಮಣ ಮಾಡುತ್ತಿದ್ದಾರೆ ಎಂದು ಅರ್ಜಿಯಲ್ಲಿ ನಮೂದಿಸಿರುತ್ತೇನೆ ಹಾಗೂ ಅದರಲ್ಲಿ ಮನೆ ನಂಬರ 122 ರ ಕುರಿತು ಯಾವುದೇ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಕೋರಿರುವುದಿಲ್ಲ. MA 98/2023 ರಲ್ಲಿ ಪ್ರತಿವಾದಿಯರು ಮನೆ ನಂಬರ 123/1 ರ ಹಿಂಭಾಗದಲ್ಲಿ ಅವರ ಖರೀದಿ ಪತ್ರದ ಅನುಸಾರ ಅವರ ಜಾಗದಲ್ಲಿ ಕಟ್ಟಡ ಕೆಲಸ ಕೈಗೊಳ್ಳಲು ಯಾವುದೇ ಅಡಚಣೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ ಹಾಗೂ ನ್ಯಾಯಾಲಯವೇ ಅನುಮತಿ ನೀಡಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತನ್ನ ಜಾಗದಲ್ಲಿ 16.5 ಅಡಿ ಜಾಗದಲ್ಲಿ ಯಾವುದೇ ಕಟ್ಟಡ ಕಟ್ಟಬಾರದು ಎಂದು ತಾನು ಆದೇಶ ಕೋರಿದ್ದಾಗಿ ನುಡಿಯುತ್ತಾರೆ. ಪ್ರತಿವಾದಿಯರು ತಮ್ಮದೇ ಆಸ್ತಿಯಲ್ಲಿ ಕಟ್ಟಡ ಕಟ್ಟಿಕೊಂಡಿರುತ್ತಾರೆ ಹಾಗೂ ನನ್ನ ಆಸ್ತಿಯಲ್ಲಿ ಯಾವುದೇ ಅತಿಕ್ರಮಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರು ನ್ಯಾಯಾಲಯದ ಆದೇಶದ ವಿರುದ್ಧ ಯಾವುದೇ ಕಟ್ಟಡ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶ ಆದ ನಂತರ ಪ್ರತಿವಾದಿಯರು ಅತಿಕ್ರಮಣ ಮಾಡಿ ಕಟ್ಟಡ ಕಟ್ಟಿರುತ್ತಾರೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಯರು ನ್ಯಾಯಾಲಯದ ಆದೇಶದ ಉಲ್ಲಂಘಣೆ ಮಾಡಿ ಯಾವುದೇ ಕಟ್ಟಡ ಕೆಲಸ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ.

3. ಸದರಿ ದಾವೆಯಲ್ಲಿ ಪೋಲಿಸ ರಕ್ಷಣೆ ಆದೇಶ ಸಹ ಆಗಿರುತ್ತದೆ ಎಂದರೆ ಸರಿ. ಪೋಲಿಸರು ಜಾಗಕ್ಕೆ ಬಂದು ವೀಕ್ಷಿಸಿದಾಗ ಅವರು MA 98/2023 ರ ಆದೇಶವನ್ನು ನೋಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ಅವರ ಖರೀದಿ ಪತ್ರದ ಪ್ರಕಾರ ಕಟ್ಟಡ ಕೆಲಸ ಮಾಡುತ್ತಿದ್ದ ಕಾರಣ ಪೋಲಿಸರು ಅದನ್ನು ಪರಿಶೀಲಿಸಿ ಅದೇ ಕಾರಣಕ್ಕೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿ. ಪೋಲಿಸರು ನನಗೆ ತಿಳಿಸಿ ಹೇಳಿದರೂ ಸಹ ಪ್ರತಿವಾದಿಯರಿಗೆ ವಿನಾಕಾರಣ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ನಮಗೆ ಯಾವುದೇ ವರದಿ ನೀಡಿರುವುದಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**